ಹನೂರು ಕ್ಷೇತ್ರದಲ್ಲಿ ರಸ್ತೆ ಹಾಳಾಗಿರುವುದು

273 (577) ಶ್ರೀ ನರೇಂದ್ರ ಆರ್. (ಹನೂರು): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹನೂರು ಕ್ಷೇತ್ರದ ಕೊತ್ತನೂರು ಗ್ರಾಮದಿಂದ ಬಡಳ್ಳಿ ಗ್ರಾಮದವರೆಗೆ ಹಾಗೂ ಅಜ್ಜಿಪುರದಿಂದ ದೊಮ್ಮನಗುಡೆ ಗ್ರಾಮದವರೆಗೆ ರಾಮಾಪುರದಿಂದ ದಿನ್ನಳ್ಳಿವರೆಗೆ ವಯಾ ಹೂಗ್ಯ ರಸ್ತೆಯು ಸಂಪೂರ್ಣವಾಗಿ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹನೂರಿನಿಂದ ಮೇಕೆದಾಟು ಮಾರ್ಗವಾಗಿ ಬೆಂಗಳೂರಿಗೆ ಸಂಚರಿಸಲು ಮಾರ್ಗ ರಚಿಸಲು ಸರ್ಕಾರ ಯೋಜನೆಯನ್ನು ರೂಪಿಸಿದೆಯೇ;

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):

ಅ) ಸರ್ಕಾರದ ಗಮನಕ್ಕೆ ಬಂದಿದೆ. ಮುಂದುವರೆದು, ಕೊತ್ತನೂರು ಗ್ರಾಮದಿಂದ ಬಡಳ್ಳಿ ಗ್ರಾಮದವರೆಗೆ ರಸ್ತೆಯು 14.20 ಕಿ.ಮೀ. ಉದ್ದದ ಜಿಲ್ಲಾ ಮುಖ್ಯ ರಸ್ತೆಯಾಗಿರುತ್ತದೆ. ಆಯ್ದ ಹಾಳಾದ ಭಾಗಗಳನ್ನು ವಾರ್ಷಿಕ ನಿರ್ವಹಣೆ ರೂ. 1.50 ಲಕ್ಷ ಅನುದಾನದಲ್ಲಿ ದುರಸ್ತಿಗೊಳಿಸಿ ವಾಹನ ಸಂಚಾರ ಯೋಗ್ಯವಿಡಲಾಗಿದೆ.

ಅಜ್ಜಿಪುರದಿಂದ ದೊಮ್ಮನಗುಡೆ ರಸ್ತೆ ಗ್ರಾಮೀಣ ರಸ್ತೆಯಾಗಿದ್ದು ಜಿಲ್ಲಾ ಪಂಚಾಯ್ತಿ ವ್ಯಾಪ್ತಿಗೆ ಬರುತ್ತದೆ.

ರಾಮಪುರದಿಂದ ದಿನ್ನಳ್ಳಿ–ಹೂಗ್ಯವರೆಗೆ ಒಟ್ಟಾರೆ 42.30 ಕಿ.ಮೀ. ಉದ್ದದ ಜಿಲ್ಲಾ ಮುಖ್ಯ ರಸ್ತೆಯಾಗಿರುತ್ತದೆ.

ಆಯ್ದೆ ಹಾಳಾದ ಭಾಗಗಳನ್ನು ವಾರ್ಷಿಕ ನಿರ್ವಹಣೆ ರೂ. 3.50 ಲಕ್ಷ ಅನುದಾನದಲ್ಲಿ ದುರಸ್ತಿಗೊಳಿಸಿ ವಾಹನ ಸಂಚಾರಕ್ಕೆ ಯೋಗ್ಯವಿಡಲಾಗಿದೆ.

ಆ) ಹನೂರಿನಿಂದ ಮೇಕೆದಾಟು ಮಾರ್ಗವಾಗಿ ಬೆಂಗಳೂರಿಗೆ ಸಂಚರಿಸಲು ಮಾರ್ಗ ರಚಿಸಲು ಪ್ರಸ್ತುತ ಯೋಜನೆಯನ್ನು ರೂಪಿಸಿರುವುದಿಲ್ಲಾ ಕಾರಣ ನಿವೇಶನ ವನ್ಯಜೀವಿ ಸಂರಕ್ಷಣಾ ಅರಣ್ಯ ಪ್ರದೇಶದಲ್ಲಿರುತ್ತದೆ.

ಇ) ಸಮಗ್ರವಾಗಿ ನಿವೇಶನದ ಸರ್ವೇಕ್ಷಣ ನಡೆಸಿ ತದನಂತರ ಸಾಧ್ಯಾಸಧ್ಯತೆ ಬಗ್ಗೆ ಪರಿಶೀಲಿಸಲಾಗುವುದು.

ವಿಜಾಪುರ ಜಿಲ್ಲೆಯಲ್ಲಿ ಹೊಸ ಸಕ್ಕರೆ ಕಾರ್ಖಾನೆಗಳನ್ನು ತೆರೆಯುವುದು

274 (586) ಶ್ರೀ ಪಾಟೀಲ್ ಎಂ.ಬಿ. (ಬಬಲೇಶ್ವರ): ಮಾನ್ಯ ತೋಟಗಾರಿಕೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ಜಿಲ್ಲೆಯಲ್ಲಿ ಹೊಸದಾಗಿ ತೆರೆಯಲು ಉದ್ದೇಶಿಸಿರುವ ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಎಷ್ಟು ; ಹಾಗಿದ್ದಲ್ಲಿ, ಯಾವ ಯಾವ ಸ್ಥಳಗಳಲ್ಲಿ ತೆರೆಯಲುದ್ದೇಶಿಸಿದೆ ; (ವಿವರವಾದ ಮಾಹಿತಿಯನ್ನು ಒದಗಿಸುವುದು)

ಆ) ಒಂದು ಸಕ್ಕರೆ ಕಾರ್ಖಾನೆಯಿಂದ ಇನ್ನೊಂದು ಸಕ್ಕರೆ ಕಾರ್ಖಾನೆಗೆ 15 ಕಿ.ಮೀ. ಅಂತರ ಇರುವುದು ಅವಶ್ಯಕವೆ ; ಹಾಗಿದ್ದಲ್ಲಿ, ಕೇಂದ್ರ ಸರಕಾರದಿಂದ ಐ.ಇ.ಎಂ. ಪಡೆದುಕೊಳ್ಳಲು ಅಂತರದ ಪ್ರಮಾಣ ಪತ್ರ ನೀಡುವವರು ಯಾರು ;